



ಸಂಗಮನೇರ್ ಎಂಬ ಊರಲ್ಲಿ ಕೆಲಸ ಮಾಡುತ್ತಿದ್ದಾಗ, ನಮ್ಮ ಆಸ್ಪತ್ರೆಗೆ ಒಬ್ಬ ರೋಗಿ ಸೇರಿಕೊಂಡರು. ಬಸ್ ಅಪಘಾತದಲ್ಲಿ ಅವರ ತಲೆಗೆ ಪೆಟ್ಟಾಗಿ, ಕಣ್ಣುಗಳಿಗೂ ಗಾಯವಾಗಿ ಕಾಣದಾಗಿತ್ತು. ಪ್ರಜ್ಞೆಯೂ ಇರಲಿಲ್ಲ. ಅವರು ಯಾರು ಎಂಬುದು ಗೊತ್ತಿಲ್ಲದಿದ್ದರೂ ಆಸ್ಪತ್ರೆಯ ಆಡಳಿತ ನಿರ್ದೇಶಕರು ಮೊದಲು ಚಿಕಿತ್ಸೆ ಮಾಡಿಸಿದರು. ನಂತರ ವಿಳಾಸದ ತಪಾಸಣೆಗೆ ತೊಡಗಿದಾಗ, ಆ ರೋಗಿ ಕರ್ನಾಟಕದವರು ಎಂದು ತಿಳಿಯಿತು. ಆಗ ಅವರ ಪೂರ್ಣ ಜವಾಬ್ದಾರಿ ನನಗೆ ವಹಿಸಿದರು.




ಆ ರೋಗಿಯ ಮನೆಯವರೊಂದಿಗೆ ಫೋನಲ್ಲಿ ಮಾತಾಡಿ ಬರಲು ಹೇಳಿದಾಗ, ಅವರು ದುಡ್ಡು ಹೊಂದಿಸಿಕೊಂಡು ಬರುವುದಕ್ಕೆ ಎರಡು ದಿನಗಳು ಬೇಕಾಯಿತು. ಅವರು ವಿಜಯಪುರ ಕಡೆಯವರಾಗಿದ್ದರು. ಅವರಿಗೆ ರೋಗಿಯ ಸ್ಥಿತಿ, ಕೊಟ್ಟ ಚಿಕಿತ್ಸೆಯ ಬಗ್ಗೆ ವಿವರಿಸಿದೆ. ಅವರಿಗೆ ಮರಾಠಿ ಬರುತ್ತಿರಲಿಲ್ಲ, ಹಿಂದಿ ಅಲ್ಪಸ್ವಲ್ಪ ಬರುತ್ತಿತ್ತಷ್ಟೆ. ಆಸ್ಪತ್ರೆಯವರಿಗೆ ಕನ್ನಡ ಬರದು. ಹೀಗಾಗಿ ನಾನಿಲ್ಲಿ ದ್ವಿಭಾಷಿಯ ಪಾತ್ರ ನಿರ್ವಹಿಸಬೇಕಾಯಿತು. ಆಸ್ಪತ್ರೆಯ ಬಿಲ್ಲು ಸ್ವಲ್ಪ ಕಡಿಮೆ ಮಾಡಿಸಿ, ಆ್ಯಂಬುಲೆನ್ಸ್‌ನಲ್ಲಿ ಕಳುಹಿಸಿಕೊಟ್ಟೆ. ಹೋಗುವಾಗ, 'ಸರ್, ನಿಮ್ಮಿಂದ ಬಹಳ ಉಪಕಾರವಾಯ್ತು. ನೀವಿರದೆ ಹೋಗಿದ್ದರ ನಮಗ ಬಹಳ ಹೈರಾಣ ಆಗ್ತಿತ್ತು. ನಮ್ಮ ಪಾಲಿನ ದೇವರು ನೀವು' ಅಂತೆಲ್ಲ ಅಂದ್ರು. ಅವರನ್ನು ನೋಡಿದರೇ, ಕಷ್ಟಪಟ್ಟು ದುಡಿಯುವ ಬಡಜನರು ಎಂದು ತಿಳಿಯುತ್ತಿತ್ತು. ನಾನು 'ಹಾಗೆಲ್ಲ ಹೇಳ್ಬೇಡಿ, ನಾನಿಲ್ಲಿ ಕೆಲಸ ಮಾಡ್ತಿದ್ದೀನಿ. ಹೀಗಾಗಿ ಸಹಾಯ ಮಾಡೋಕಾಯ್ತು' ಎಂದೆ. ಹಣ ಕೊಡಲು ಬಂದ್ರು, ಪಾಪ! ಅವರೇ ಕಷ್ಟದಲ್ಲಿದ್ದಾರೆ, 'ಇರಲಿ, ನಿಮಗೆ ಬೇಕಾಗುತ್ತೆ. ಇಟ್ಕೊಳ್ಳಿ' ಎಂದು ಹೇಳಿ ಕಳಿಸಿದೆ. ಅವರ ಕೃತಜ್ಞತೆ ನೋಡಿ ನನಗೇ ಕಣ್ಣೀರು ಬರುವಂತಾಗಿತ್ತು.

ಮಹಾರಾಷ್ಟ್ರದಲ್ಲಿ ಸ್ಟಾಫ್ ನರ್ಸ್ ಕಮ್ ಟ್ಯೂಟರ್ ಆಗಿ ಮತ್ತು ಒಂದು ವರ್ಷ ಪ್ರಿನ್ಸಿಪಾಲ್ ಆಗಿ ಕೆಲಸ ಮಾಡುತ್ತಿದ್ದ ನಾನು, ಆ ಹುದ್ದೆಗೆ ರಾಜೀನಾಮೆ ಕೊಟ್ಟು ಬೆಂಗಳೂರಿಗೆ ಶುಶ್ರೂಷಕನಾಗಿ ಬಂದೆ.

ಮೊದಲನೆಯ ದಿನದ ಪೋಸ್ಟಿಂಗ್ ಎಮರ್ಜೆನ್ಸಿಗೆ ಕಳಿಸಿದ್ರು. ಆಮೇಲಾಮೇಲೆ ಎಲ್ಲಾ ಡಿಪಾರ್ಟ್‌ಮೆಂಟ್‌ಗಳಿಗೂ ಪೋಸ್ಟಿಂಗ್ ಹಾಕಿದ್ರು. ಶುಶ್ರೂಷಕನಾಗಿ ಬಂದಾಗಿನಿಂದ ಇಲ್ಲಿಯವರೆಗೂ ಹಲವಾರು ಘಟನೆಗಳು ಅನುಭವಕ್ಕೆ ಬಂದಿವೆ. ಅದರಲ್ಲಿ ಒಂದು ಘಟನೆಯಂತೂ ಕಣ್ಣಿಗೆ ಕಟ್ಟಿದಂತೆ ನೆನಪಿದೆ.

ಅದು ನಾನು ಕೆಲಸಕ್ಕೆ ಸೇರಿಕೊಂಡ ಹೊಸತು. ವೃದ್ಧರೊಬ್ಬರು ಕುಂಟುತ್ತ, ಅಂಕುಡೊಂಕಾಗಿ ನಡೆಯುತ್ತ ತುರ್ತು ಚಿಕಿತ್ಸೆಯ ಘಟಕದ ಕಡೆಗೆ ಬರ್ತಿದ್ದರು. ಆಸ್ಪತ್ರೆಯ ಸೆಕ್ಯೂರಿಟಿ ತಡೆದು ನಿಲ್ಲಿಸಿದರೂ ಆ ತಾತಪ್ಪ ನಿಲ್ಲದೆ ಒಳಗಡೆ ಬಂದು ಮಂಚದ ಮೇಲೆ ಮಲಗಿದರು. ನಾನೂ ಸ್ವಲ್ಪ ಏರು ಧ್ವನಿಯಲ್ಲಿ, 'ಏನಪ್ಪ ಗೊತ್ತಾಗಲ್ವ? ಸೆಕ್ಯೂರಿಟಿ ಹೇಳಿದ್ರೂ ಅವರ ಮಾತಿಗೆ ಬೆಲೆ ಕೊಡದೆ ಹೀಗೆ ಬರೋದು?' ಅಂತ ಜೋರು ಮಾಡಿದೆ. ಅದಕ್ಕವರು, 'ಇಲ್ಲಪ್ಪ, ಕಾಲು ತುಂಬ ನೋವಾಗ್ತಿದೆ. ಡ್ರೆಸ್ಸಿಂಗ್ ಮಾಡಿಸಿಕೊಂಡು